

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 21-06-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಝೈದ್ ಬಿನ್ ಹಾರಿಸರಿಗೆ ಸಂಬಂಧಿಸಿ ಕೆಲವು ವಿಷಯಗಳನ್ನು ವಿವರಿಸಲಿದೆ ಎಂದು ನಾನು ಹೇಳಿದ್ದೆ. ಹಝ್ರತ್ ಝೈನಬ್ ಬಿನ್ತ್ ಜುಹ್‌ಶ್‌ರವರ ಪ್ರಾಯ ವಿವಾಹವಾಗುವಾಗ 35 ವರ್ಷಗಳಾಗಿದ್ದುವು. ಅರಬ್ ದೇಶದ ಪರಿಸ್ಥಿತಿಗೆ ಅನುಸಾರವಾಗಿ ಈ ಪ್ರಾಯವನ್ನು ಹೆಚ್ಚು ಪ್ರಾಯವೆಂದೇ ಹೇಳಬಹುದಾಗಿದೆ. ಹಝ್ರತ್ ಝೈನಬ್ ಅತ್ಯಂತ ನಿಷ್ಠಾವಂತ ಮುತ್ತಖಿಯೂ ಸಾತ್ವಿಕೆಯೂ ಅನುಗ್ರಹ ಭರಿತೆಯೂ ಆದ ಮಹಿಳೆಯಾಗಿದ್ದರು. ಹಝ್ರತ್ ಆಯಿಶ(ರ) ಅವರ ವೈಯ್ಯಕ್ತಿಕ ತಖ್ವ ಮತ್ತು ತ್ವಹಾರತ್ (ಪರಿಶುದ್ಧಿ) ಬಗ್ಗೆ ಬಹಳ ಪ್ರಶಂಸಿಸುತ್ತಿದ್ದರು. ಝೈನಬರಿಗಿಂತ ಹೆಚ್ಚು ಉತ್ತಮಳಾದ ಮಹಿಳೆಯನ್ನು ನಾನು ಕಂಡಿಲ್ಲ ಎಂದು ಅವರು ಹೇಳುತ್ತಿದ್ದರು. ಅವರು ಬಹಳ ಮುತ್ತಖಿ, ಬಹಳ ಸತ್ಯವಂತೆ ಮತ್ತು ಕೌಟುಂಬಿಕ ಸಂಬಂಧದ ಬಗ್ಗೆ ಲಕ್ಷ್ಯ ನೀಡುವವರೂ ಆಗಿದ್ದರು. ಬಹಳ ದಾನ ಧರ್ಮ ಮಾಡುವವರೂ ಒಳಿತನ್ನೂ ದೇವ ಸಾಮೀಪ್ಯವನ್ನೂ ಗಳಿಸುವ ಕರ್ಮಗಳಲ್ಲಿ ಸದಾ ನಿರತರೂ ಆಗಿದ್ದರು. ದಾನಧರ್ಮ ನೀಡುವ ಬಗ್ಗೆ ಹಝ್ರತ್ ಝೈನಬ(ರ)ರ ಉನ್ನತ ಮಟ್ಟಕ್ಕೆ ಸಂಬಂಧಿಸಿ ಹಝ್ರತ್ ಆಯಿಶ(ರ) ಹೀಗೆ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು, **ಅಸ್ರಿಅ್‌ಕುನ್ನ ಲಿಹಾಖನ್ ಬೀ ಅತ್‌ವಲಿಕುನ್ನ ಯದಹು.** ನಿಮ್ಮ ಪೈಕಿ ಯಾರು ನೀಳವಾದ ಕೈಗಳನ್ನು ಹೊಂದಿರುವಳೋ ಆಕೆ ನಾನು ಮೃತನಾದ ನಂತರ ಎಲ್ಲರಿಗಿಂತ ಮೊದಲು ಮೃತಳಾಗಿ ನನ್ನ ಬಳಿಗೆ ತಲಪುವಳು. ನಾವು ಈ ಮಾತಿನ ಬಾಹ್ಯ ಅರ್ಥ ಪ್ರಕಾರ ನಮ್ಮ ಕೈಗಳನ್ನು ಅಳತೆ ಮಾಡಲು ಪ್ರಾರಂಭಿಸಿದ್ದೆವು. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಎಲ್ಲರಿಗಿಂತ ಮೊದಲು ಝೈನಬ್ ಬಿನ್ತ್ ಜುಹ್‌ಶ್ ಮೃತರಾದಾಗ ನಮಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಮಾತಿನ ರಹಸ್ಯಾರ್ಥ ತಿಳಿಯಿತು. ಕೈ ಎಂದು ದಾನಧರ್ಮ ನೀಡುವ ಕೈಯ ಬಗ್ಗೆ ಹೇಳಿದುದಾಗಿತ್ತು. ಬಾಹ್ಯ ಕೈಯ ಬಗ್ಗೆ ಅಲ್ಲ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ಝೈನಬರ ವಿವಾಹಕ್ಕೆ ಸಂಬಂಧಿಸಿ ಮದೀನದ ಕಪಟ ವಿಶ್ವಾಸಿಗಳು ಬಹಳ ಆಕ್ಷೇಪಿಸಿದರು. ಅವರು ಬಹಿರಂಗವಾಗಿ ಆಕ್ಷೇಪಿಸಿದರು- ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪುತ್ರನು ವಿಚ್ಛೇದನ ನೀಡಿದ ಮಹಿಳೆಯನ್ನು ವಿವಾಹವಾಗಿ ತನ್ನ ಸೊಸೆಯನ್ನು ವಿವಾಹವಾಗುವುದನ್ನು ತನಗೆ ಧರ್ಮಬದ್ಧವಾಗಿ ಮಾಡಿದರೆಂದು. ಆದರೆ ಆ ವಿವಾಹದ ಉದ್ದೇಶವೇ ಅರಬ್ ದೇಶದ ಅಜ್ಞಾನ ಕಾಲದ ಸಂಪ್ರದಾಯವನ್ನು ಅಳಿಸಿ ಬಿಡುವುದಾಗಿತ್ತು. ಆದುದರಿಂದ ಅಂತಹ ದುರಾರೋಪಗಳನ್ನು ಆಲಿಸುವುದು ಸಹ ಅನಿವಾರ್ಯವಾಗಿತ್ತು.

ಇಬ್ನು ಸಅದ್ ಮತ್ತು ತಬರಿ ಮೊದಲಾದ ಲೇಖಕರು ಹಝ್ರತ್ ಝೈನಬ್ ಬಿನ್ತ್ ಜುಹ್‌ಶ್‌ರವರ ವಿವಾಹಕ್ಕೆ ಸಂಬಂಧಿಸಿ ಒಂದು ಸುಳ್ಳು ಮತ್ತು ನಿರಾಧಾರ ವರದಿಯನ್ನು ತಮ್ಮ ಪುಸ್ತಕಗಳಲ್ಲಿ ಬರೆದಿದ್ದಾರೆ. ಈ ವರದಿಯಲ್ಲಿ ವಿವರಿಸಲಾದ ಕಥೆ ಸಂಪೂರ್ಣ ಸುಳ್ಳಾಗಿದೆ. ಸಂಶೋಧಕರು ಈ ಕಥೆಯನ್ನು ಸುಳ್ಳು ಎಂದೂ ಕೃತ್ರಿಮ ಎಂದೂ ಹೇಳಿದ್ದಾರೆ. ಕೃತ್ರಿಮವಾಗಿ ಸೃಷ್ಟಿಸಿದ ಈ ಕಥೆಯ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದ್ದಾರೆ: ಆ ಕಾಲದಲ್ಲಿ ಮದೀನದ ಕಪಟವಿಶ್ವಾಸಿಗಳು ಬಹಳ ಪ್ರಬಲರಾಗಿದ್ದರು. ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸಲೂಲ್‌ನ ನೇತೃತ್ವದಲ್ಲಿ ಇಸ್ಲಾಮಿನ ವಿರುದ್ಧ ಮತ್ತು ಇಸ್ಲಾಮಿನ ಸ್ಥಾಪಕರನ್ನು ಅಪಕೀರ್ತಿಗೊಳಿಸುವ ಬಗ್ಗೆ ಸಕ್ರಿಯ ಕ್ರಮಗಳು ಜಾರಿಯಲ್ಲಿದ್ದುವು. ಅವರ ಕಾರ್ಯತಂತ್ರ ಹೇಗಿತ್ತೆಂದರೆ ಸುಳ್ಳು ಮತ್ತು ಕೃತ್ರಿಮ ಕಥೆಗಳನ್ನು ರಚಿಸಿ ರಹಸ್ಯವಾಗಿ ಜನರ ಮಧ್ಯೆ ಹರಡುತ್ತಿದ್ದರು. ಹೆಚ್ಚು ಕಮ್ಮಿ ಅದೇ ಕಾಲದಲ್ಲಿ ಹಝ್ರತ್ ಆಯಿಶ(ರ)ರ ವಿರುದ್ಧ ಅಪವಾದದ ಸುಳ್ಳು ಪ್ರಚಾರ ಮಾಡುವ ಅಪಾಯಕರ ಸಂಭವ ಸಹ ನಡೆಯಿತು. ಅಬ್ದುಲ್ಲಾ ಮತ್ತು ಅವನ ವಂಚಕರಾದ ಸಂಗಡಿಗರು ಈ ಸುಳ್ಳು ಅಪವಾದದ ಬಗ್ಗೆ ಎಷ್ಟು ಪ್ರಚಾರ ಮಾಡಿದರೆಂದರೆ ಮುಸ್ಲಿಮರ ನೆಮ್ಮದಿ ಕೆಟ್ಟುಹೋಯಿತು. ಕೆಲವು ಬಲಹೀನರಾದ ತಿಳುವಳಿಕೆಯಿಲ್ಲದ ಮುಸ್ಲಿಮರು ಸಹ ಅವರ ಸುಳ್ಳು ಪ್ರಚಾರದಿಂದ ಪ್ರಭಾವಿತರಾದರು. ಆ ಕಾಲ ಕಪಟವಿಶ್ವಾಸಿಗಳು ಪ್ರಬಲರಾಗಿದ್ದ ಕಾಲವಾಗಿತ್ತು. ಅವರ ಅತ್ಯಂತ ಪ್ರಿಯವಾಗಿದ್ದ ಆಯುಧ ಸುಳ್ಳು, ಕೊಳಕು ಕಥೆಗಳನ್ನು ಸೃಷ್ಟಿಸಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಮತ್ತು ಅವರೊಂದಿಗೆ ಸಂಬಂಧ ಹೊಂದಿದವರನ್ನೂ ಅಪಕೀರ್ತಿಗೊಳಪಡಿಸುವುದಾಗಿತ್ತು. ಅವರು ಸುಳ್ಳು ವರದಿಗಳನ್ನು ಎಷ್ಟು ಜಾಗರೂಕತೆಯಿಂದ ಹಬ್ಬಿಸುತ್ತಿದ್ದರೆಂದರೆ ಕೆಲವು ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಅವರ ಹಿರಿಯ ಸಹಾಬರಿಗೆ ವಿಶದವಾದ ಸುಳ್ಳು ಸಮಾಚಾರ ದೊರಕದ ಕಾರಣ ಅವುಗಳನ್ನು ಅಲ್ಲಗಳೆಯಲು ಸಂದರ್ಭ ಸಿಗುತ್ತಿರಲಿಲ್ಲ. ಮತ್ತು ಸುಳ್ಳಿನ ವಿಷ ಒಳಗಿಂದೊಳಗೆ ಹರಡುತ್ತಾ ಇತ್ತು.

ಹಝ್ರತ್ ಝೈನಬರ ಕಥೆಗೆ ಸಂಬಂಧಿಸಿ ಸರ್ ವಿಲ್ಯಂ ಮ್ಯೂರ್ ಹೃದಯಕ್ಕೆ ನೋವನ್ನುಂಟು ಮಾಡುವ ಈ ಅಪವಾದ ಸಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಆರೋಪಿಸಿದ್ದಾನೆ: ಪ್ರಾಯ ವರ್ಧಿಸಿದ ಹಾಗೆ ಅವರ

ಶಾರೀರಿಕ ಆಶಾಭಿಲಾಷೆಗಳು ಸಹ ವರ್ಧಿಸುತ್ತಾ ಇತ್ತು ಎಂದು (ನಊದುಬಿಲ್ಲಾಹ್). ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದಕ್ಕಿಂತ ಹೆಚ್ಚು ವಿವಾಹವಾದರು ಎನ್ನುವುದು ಒಂದು ಚಾರಿತ್ರಿಕ ಸತ್ಯವಾಗಿದೆ. ಇನ್ನೊಂದು ಅಂಗೀಕೃತ ಚಾರಿತ್ರಿಕ ಸತ್ಯವೇನೆಂದರೆ ಹಝ್ರತ್ ಖದೀಜರೊಂದಿಗೆ ಮಾಡಿದ ವಿವಾಹದ ಹೊರತು ಉಳಿದ ಎಲ್ಲಾ ವಿವಾಹಗಳು ಹಝ್ರತ್ ಪೈಗಂಬರರ ಇಳಿವಯಸ್ಸಿನಲ್ಲಿ ನಡೆಸಲಾದ ವಿವಾಹಗಳೆಂದು ಹೇಳಬಹುದಾಗಿವೆ. ಆದರೆ ಅವರ ಈ ವಿವಾಹಗಳು ಅವರ ಶಾರೀರಿಕ ಅಭಿಲಾಷೆಗಳನ್ನು ಈಡೇರಿಸುವ ಮನೋಭಾವದಿಂದ ಮಾಡಲಾಗಿತ್ತು ಎಂದು ಹೇಳುವುದು ಒಬ್ಬ ಚರಿತ್ರೆಗಾರನಿಗೆ ಶೋಭಾಯಮಾನವಾಗಿರುವುದಿಲ್ಲ. ಒಬ್ಬ ಸಭ್ಯ ವ್ಯಕ್ತಿಗೂ ಶೋಭಾಯಮಾನವಾಗಿರುವುದಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಪ್ಪತ್ತೈದು ವರ್ಷದ ತರುಣನಾಗಿದ್ದಾಗ ನಲ್ವತ್ತು ವರ್ಷ ಪ್ರಾಯದ ಮಧ್ಯವಯಸ್ಕೆ ವಿಧವೆಯನ್ನು ವಿವಾಹವಾದರೆಂಬ ಸತ್ಯ ಸಂಗತಿ ವಿಲ್ಯಂ ಮ್ಯೂರ್‌ಗೆ ತಿಳಿಯದಿರುವ ವಿಷಯವೇನೂ ಅಲ್ಲ. ಅವರು ತಾನು ಐವತ್ತು ವರ್ಷ ಪ್ರಾಯದವನಾಗುವ ತನಕ ಈ ವಿವಾಹ ಸಂಬಂಧವನ್ನು ಎಷ್ಟು ಚೆನ್ನಾಗಿ, ನಿಷ್ಠಬದ್ಧರಾಗಿ ನಿಭಾಯಿಸಿದರೆಂದರೆ ಅದಕ್ಕೆ ಸಮಾನವಾದ ಉದಾಹರಣೆ ಸಿಗಲಾರದು. ವಿಲ್ಯಂ ಮ್ಯೂರ್ ಸಾಹಿಬರಿಗೆ ಈ ಕೆಳಗಿನ ವಿಷಯ ಸಹ ಅಜ್ಞಾತವಾಗಿರಲಿಲ್ಲ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಲ್ಲಿ ಮಾಡುತ್ತಿದ್ದ ಇಸ್ಲಾಮ್ ಧರ್ಮ ಪ್ರಚಾರದಿಂದ ಆತಂಕಗೊಂಡು ಉತ್‌ಬ ಬಿನ್ ರಬೀಅನ ನೇತೃತ್ವದಲ್ಲಿ ಮಕ್ಕದವರು ಒಂದು ಪ್ರತಿನಿಧಿ ಸಂಘವನ್ನು ಅವರ ಬಳಿಗೆ ಕಳುಹಿಸಿ ಅಪೇಕ್ಷಿಸಿದ್ದರು– ನೀವು ನಿಮ್ಮ ಧರ್ಮ ಪ್ರಚಾರದ ಕೆಲಸವನ್ನು ನಿಲ್ಲಿಸಿರಿ ಎಂದು. ಸಂಪತ್ತು ಮತ್ತು ಅಧಿಕಾರ ನೀಡುವ ಪ್ರಲೋಭನೆ ನೀಡುವುದರ ಜೊತೆಗೆ ಅವರು ಹೀಗೆ ಸಹ ಹೇಳಿದ್ದರು, ನೀವು ಇಚ್ಛಿಸುವ ಹುಡುಗಿಯೊಂದಿಗೆ ನಿಮಗೆ ವಿವಾಹ ಮಾಡಿ ಕೊಡಲು ನಾವು ಸಿದ್ಧರಾಗಿದ್ದೇವೆ. ನೀವು ನಮ್ಮ ಧರ್ಮವನ್ನು ನಿಂದಿಸುವುದನ್ನು ಮತ್ತು ಹೊಸ ಧರ್ಮದ ಪ್ರಚಾರ ಮಾಡುವುದನ್ನು ನಿಲ್ಲಿಸಬೇಕು.

ಆ ಸಮಯದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಯಸ್ಸು ಹೆಚ್ಚಿಗೆ ಇರಲಿಲ್ಲ ಮತ್ತು ಅವರ ಶಾರೀರಿಕ ಶಕ್ತಿ ಸಹ ಅನಂತರದ ಕಾಲಕ್ಕಿಂತ ಬಲವತ್ತಾಗಿತ್ತು. ಆದರೆ ಆ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದ ಗಣ್ಯ ಜನರ ಪ್ರತಿನಿಧಿಗಳಿಗೆ ನೀಡಿದ ಉತ್ತರ ಸಹ ಚರಿತ್ರೆಯ ಪುಸ್ತಕಗಳಲ್ಲಿ ಬಹಿರಂಗವಾಗಿ ಕಾಣಬಹುದಾಗಿದೆ. ಅದೇ ರೀತಿ ಇನ್ನೊಂದು ಚಾರಿತ್ರಿಕ ಸತ್ಯ ಸಹ ವಿಲ್ಯಂ ಮ್ಯೂರರ ದೃಷ್ಟಿಯಿಂದ ಮರೆಯಾಗಿರಲಾರದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನಿಂದ ನಿಯೋಜಿತನಾಗುವ ಮೊದಲು ಎಂದರೆ ಅವರು ನಲ್ವತ್ತು ವರ್ಷ ಪ್ರಾಯದವರಾಗುವ ತನಕ ಮಕ್ಕದ ಜನರು ಅವರನ್ನು ಅತ್ಯಂತ ಸದ್ಗುಣ ಸಂಪನ್ನರೆಂದು ಗಣಿಸಿದ್ದರು.

ಈ ಎಲ್ಲಾ ಸಾಕ್ಷ್ಯಾಧಾರಗಳಿದ್ದೂ ಸಹ, ಪೈಗಂಬರರ ಪ್ರಾಯವೂ ಐವತ್ತೈದು ದಾಟಿದ್ದು ಅವರ ಶಾರೀರಿಕ ಶಕ್ತಿಗಳು ಸಹಜವಾಗಿ ಕುಂದಿರುವಾಗ ಹಾಗೂ ಅವರ ಹೊಣೆಗಾರಿಕೆಗಳು ಅಸಾಮಾನ್ಯವಾಗಿ ವರ್ಧಿಸಿದ ಕಾಲದಲ್ಲಿ, ಅವರು ಭೋಗಲಾಲಸೆಯಲ್ಲಿ ಮಗ್ನರಾದರು ಎಂದು ವಿಲ್ಯಂ ಮ್ಯೂರ್ ಬರೆದಿರುವುದು ನಿಶ್ಚಯವಾಗಿಯೂ ಒಂದು ಪೂರ್ವಾಗ್ರಹ ಪೀಡಿತವಾದ ಅಭಿಪ್ರಾಯವಾಗಿದೆ. ಖಂಡಿತವಾಗಿಯೂ ಅದೊಂದು ದ್ವೇಷಭರಿತ ವಿಮರ್ಶೆಯಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಯೌವ್ವನ ಕಾಲದಲ್ಲಿ ತನ್ನವರಿಂದ ಮತ್ತು ಪರರಿಂದ ಪ್ರಾಮಾಣಿಕ (ಅಮೀನ್) ಎಂಬ ಪ್ರಶಸ್ತಿ ಗಳಿಸಿದವರಾಗಿದ್ದರು ಎಂಬ ಚಾರಿತ್ರಿಕ ಸತ್ಯದ ಬೆಳಕಿನಲ್ಲಿ ಈ ವಿಮರ್ಶೆ ದ್ವೇಷಭರಿತವಾದುದು ಎನ್ನುವುದು ಸ್ಪಷ್ಟವಾಗುತ್ತದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪಿತೃ ಸಹೋದರಿಯ ಪುತ್ರಿಯ ವಿವಾಹವನ್ನು ಹಝ್ರತ್ ಝೈದರೊಂದಿಗೆ ಮಾಡಿಸಿದರು. ಆದರೆ ಈ ವಿವಾಹ ಸಂಬಂಧ ಮುಂದುವರಿಯಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪುತ್ರನಿಲ್ಲ ಎಂಬ ವಿಷಯವನ್ನು ಜನರಿಗೆ ಮನವರಿಕೆ ಮಾಡಿಕೊಡಲು ಅಲ್ಲಾಹನು ಉದ್ದೇಶಿಸಿದನು. ಆದರೆ ಅರಬಿಗಳ ಪುರಾತನ ಆಚಾರ ಪ್ರಕಾರ ಅವರಿಗೆ ಝೈದನೆಂಬ ಪುತ್ರನಿದ್ದಾನೆ ಎಂದು ಜನರು ಭಾವಿಸಿದ್ದರು. ಜನರು ಝೈದರನ್ನು ಇಬ್ನು ಮುಹಮ್ಮದ್ ಎಂದು ಕರೆಯುತ್ತಿದ್ದರು. ಹಝ್ರತ್ ಝೈನಬರ ವಿವಾಹದ ಮೂಲಕ ಅಲ್ಲಾಹನು ಸ್ಪಷ್ಟಪಡಿಸಿದನು, ಶಾರೀರಿಕ ಸಂಬಂಧದಿಂದ ಜನಿಸುವವರೇ ನಿಜವಾದ ಪುತ್ರನಾಗಿರುತ್ತಾನೆ ಎಂದು. ದೇಶದ ನಿಯಮಗಳ ಪ್ರಕಾರ ಪುತ್ರನೆಂದು ಗಣಿಸಲ್ಪಡುವವನು ನೈಜ ಪುತ್ರನಾಗಲಾರನು. ಈ ವಿಷಯವನ್ನು ಸ್ಥಿರವಾಗಿ ಜಾರಿಗೊಳಿಸಲು ಇದ್ದ ಏಕ ಮಾತ್ರ ಮಾರ್ಗ ಹಝ್ರತ್ ಝೈದ್ ವಿವಾಹ ವಿಚ್ಛೇದನೆ ನಡೆಸಿದ ಮಹಿಳೆಯನ್ನು ತಾನು ವಿವಾಹವಾಗುವುದು ಆಗಿತ್ತು. ಆ ಮೂಲಕ ಲೌಕಿಕ ನಿಯಮಗಳ ಪ್ರಕಾರ ಪುತ್ರನೆಂದು ಗಣಿಸಲ್ಪಡುವವರು ನೈಜ ಪುತ್ರನಾಗಲಾರ ಎಂದು ಸಾಬೀತುಗೊಳಿಸಲಾಯಿತು.

ಹಝ್ರತ್ ಝೈದ್‌ರವರು ಬದರ್, ಉಹುದ್, ಖಂದಕ್ ಯುದ್ಧಗಳಲ್ಲೂ ಹುದೈಬಿಯಾ ಸಂಧಿಯಲ್ಲೂ ಭಾಗವಹಿಸಿದ್ದರು. ಖೈಬರ್ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಅವರು ನಿಷ್ಣಾತ ಬಿಲ್ಲುಗಾರರಲ್ಲಿ ಒಬ್ಬರೆಂದು ಗಣಿಸಲ್ಪಟ್ಟಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬನೂ ಮುಸ್ತಲಿಖ್ ಯುದ್ಧಕ್ಕೆ ಹೊರಟಾಗ ಹಝ್ರತ್ ಝೈದರನ್ನು ಮದೀನದ ಅಮೀರರನ್ನಾಗಿ ನೇಮಿಸಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಲ್ಲಿ ಬರೆಯುತ್ತಾರೆ: ಉಸೈರ ಯುದ್ಧದ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಮರಳಿ ಬಂದ ಹತ್ತು ದಿನಗಳೊಳಗೆ, ಮಕ್ಕದ ಒಬ್ಬ ಗಣ್ಯ ವ್ಯಕ್ತಿ ಕರ್‌ಝ್ ಬಿನ್ ಜಾಬಿರ್ ಫಹ್‌ರಿ ಎಂಬವನು ಖುರೈಶಿಗಳ ಒಂದು ತಂಡದೊಂದಿಗೆ ಮದೀನದಿಂದ ಕೇವಲ ಮೂರು ಮೈಲು ದೂರವಿದ್ದ ಹುಲ್ಲುಗಾವಲು ಮೇಲೆ ಅಚಾನಕವಾಗಿ ಆಕ್ರಮಣ ಮಾಡಿ ಮುಸ್ಲಿಮರ ಒಂಟೆ

ಮೊದಲಾದವುಗಳನ್ನು ಲೂಟಿ ಮಾಡಿ ಹೋದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇದರ ಬಗ್ಗೆ ಸಮಾಚಾರ ದೊರೆತಾಗ ತಕ್ಷಣ ಝೈದ್ ಬಿನ್ ಹಾರಿಸರನ್ನು ಮದೀನದ ಅಮೀರರನ್ನಾಗಿ ನೇಮಿಸಿ ಮುಹಾಜಿರ್‌ಗಳ ಒಂದು ತಂಡದೊಂದಿಗೆ ಲೂಟಿಗಾರರನ್ನು ಬೆನ್ನಟ್ಟಲು ಹೊರಟರು. ಬದರ್ ಸಮೀಪವಿರುವ ಸಫವಾನ್ ಎಂಬಲ್ಲಿಗೆ ತಲಪಿದಾಗ ಲೂಟಿಗಾರರನ್ನು ಕಂಡರೂ ಅವರು ತಪ್ಪಿಸಿಕೊಂಡು ಹೋದರು.

ಬದರ್ ಯುದ್ಧ ಮುಗಿದ ನಂತರ ಮರಳಿ ಬರುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈದ್ ಬಿನ್ ಹಾರಿಸರನ್ನು ಮದೀನ ಕಡೆಗೆ ಕಳುಹಿಸಿ ಹೇಳಿದರು: ಬದರ್ ಯುದ್ಧದಲ್ಲಿ ಜಯಗಳಿಸಿದ ಬಗ್ಗೆ ಮದೀನದ ನಿವಾಸಿಗಳಿಗೆ ಶುಭವಾರ್ತೆ ತಿಳಿಸು. ಹಝ್ರತ್ ಝೈದ್ ಮದೀನಕ್ಕೆ ಎಲ್ಲರಿಗಿಂತ ಮೊದಲು ತಲಪಿ ಮದೀನದ ನಿವಾಸಿಗಳಿಗೆ ಶುಭವಾರ್ತೆ ತಿಳಿಸಿದರು. ಈ ಜಯದ ಸಮಾಚಾರ ತಿಳಿದಾಗ ಮದೀನದಲ್ಲಿದ್ದ ಸಹಾಬರಿಗೆ ಸಂತೋಷವಾದರೂ ತಮಗೆ ಆ ವೈಭವಶಾಲಿ ಜಿಹಾದ್‌ನಲ್ಲಿ ಭಾಗವಹಿಸಲು ಸಾಧ್ಯವಾಗದ ಬಗ್ಗೆ ದುಃಖವೂ ಆಯಿತು. ಹಝ್ರತ್ ಝೈದ್ ಮದೀನಕ್ಕೆ ತಲಪುವ ಮೊದಲು ಹಝ್ರತ್ ರುಖಿಯ್ಯಾ (ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಗಳು) ನಿಧನ ಹೊಂದಿದ ಕಾರಣ ಮದೀನದ ಮುಸ್ಲಿಮರಿಗೆ ವಿಶಿಷ್ಟವಾಗಿ ಹಝ್ರತ್ ಉಸ್ಮಾನರಿಗೂ ಉಂಟಾದ ದುಃಖ ಸಹ ಈ ಶುಭವಾರ್ತೆಯ ಮೂಲಕ ಪರಿಹರಿಸಲ್ಪಟ್ಟಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧಕ್ಕೆ ಹೊರಡುವಾಗ ಹಝ್ರತ್ ರುಖಿಯ್ಯಾ ರೋಗಬಾಧಿತೆಯಾಗಿದ್ದರು. ಆ ಕಾರಣದಿಂದ ಹಝ್ರತ್ ಉಸ್ಮಾನ್ ಸಹ ಬದರ್ ಯುದ್ಧದಲ್ಲಿ ಭಾಗವಹಿಸಿರಲಿಲ್ಲ.

ಹಝ್ರತ್ ಝೈದ್ ಬಿನ್ ಹಾರಿಸರನ್ನು ಹಿಜರಿ 3ರ ಜಮಾದಿಲ್ ಆಖಿರ್ ತಿಂಗಳಲ್ಲಿ ಒಂದು ಯುದ್ಧ ಮಾಡಲು ಖರ್‌ದ ಎಂಬಲ್ಲಿಗೆ ಕಳುಹಿಸಲಾಗಿತ್ತು. ಅದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಬನೂ ಸಲೀಮ್ ಮತ್ತು ಬನೂ ಗತ್‌ಫಾನ್ ಗೋತ್ರಗಳ ಆಕ್ರಮಣ ಕೊನೆಗೊಂಡು ಸ್ವಲ್ಪ ಬಿಡುವು ಲಭಿಸಿದಾಗ ಇನ್ನೊಂದು ಅಪಾಯವನ್ನು ತಡೆಗಟ್ಟಲು ಮುಸ್ಲಿಮರು ಹೊರಡಬೇಕಾಯಿತು. ಜಮಾದಿಲ್ ಆಖಿರ್ ತಿಂಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಕ್ಕದ ಖುರೈಶಿಗಳ ಒಂದು ವ್ಯಾಪಾರಿ ಸಂಘ ನಜ್ದ್ ಮಾರ್ಗವಾಗಿ ದಾಟಿ ಹೋಗಲಿದೆ ಎಂಬ ವರ್ತಮಾನ ಲಭಿಸಿತು. ಈ ಮಾರ್ಗದಲ್ಲಿ ಖುರೈಶಿಗಳೊಂದಿಗೆ ಪ್ರತಿಜ್ಞಾಬದ್ಧರಾದ ಗೋತ್ರಗಳು ವಾಸಿಸುತ್ತಿದ್ದುವು. ಅವರು ಖುರೈಶಿಗಳ ಹಾಗೆಯೇ ಮುಸ್ಲಿಮರ ರಕ್ತದಾಹಿಗಳಾಗಿದ್ದರು. ಅವರೊಂದಿಗೆ ಸೇರಿಕೊಂಡು ಖುರೈಶಿಗಳು ಮದೀನವನ್ನು ರಹಸ್ಯವಾಗಿ ಆಕ್ರಮಿಸಬಹುದಾಗಿತ್ತು. ಖುರೈಶಿಗಳ ಬಲವನ್ನು ಕುಂದಿಸಲು ಮತ್ತು ಅವರನ್ನು ಶಾಂತಿ ಒಪ್ಪಂದಕ್ಕೆ ಒಲಿಯುವಂತೆ ಮಾಡಲು ಆ ಮಾರ್ಗವಾಗಿ ಬರುವ ವ್ಯಾಪಾರ ಸಂಘಗಳನ್ನು ತಡೆಗಟ್ಟುವುದು ಆವಶ್ಯಕವಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮಾಚಾರ ದೊರಕಿದ ಕೂಡಲೆ ತಾವು ಸ್ವತಂತ್ರಗೊಳಿಸಿದ ಗುಲಾಮರಾದ ಝೈದ್ ಬಿನ್ ಹಾರಿಸ್ ನೇತೃತ್ವದಲ್ಲಿ ಸಹಾಬರ ಒಂದು ಸೇನಾದಳವನ್ನು ಕಳುಹಿಸಿದರು. ಖುರೈಶಿಗಳ ವ್ಯಾಪಾರ ಸಂಘದಲ್ಲಿ ಅಬೂ ಸುಫ್‌ಯಾನ್ ಮತ್ತು ಸಫ್‌ವಾನ್ ಬಿನ್ ಉಮಯ್ಯ ಮೊದಲಾದ ಗಣ್ಯರಿದ್ದರು. ಝೈದ್ ಬಹಳ ಚುರುಕಿನಿಂದಲೂ ಜಾಗರೂಕತೆಯಿಂದಲೂ ತಮ್ಮ ಕರ್ತವ್ಯ ಈಡೇರಿಸಿದರು. ಅವರು ಖರ್‌ದ ಎಂಬಲ್ಲಿ ಖುರೈಶಿಗಳ ತಂಡವನ್ನು ಅಚಾನಕವಾಗಿ ಆಕ್ರಮಿಸಿದರು. ಖುರೈಶಿಗಳು ಗಾಬರಿಗೊಂಡು ತಮ್ಮ ಸಾಮಗ್ರಿಗಳನ್ನು ಬಿಟ್ಟು ಓಡಿ ಹೋದರು. ಹಝ್ರತ್ ಝೈದ್ ಮತ್ತು ಸಂಗಡಿಗರು ವಶಪಡಿಸಿಕೊಂಡ ಅಪಾರ ಸಾಮಗ್ರಿಗಳೊಂದಿಗೆ ಮದೀನಕ್ಕೆ ಮರಳಿದರು.

ಇನ್ನು ನಾನು ಒಂದು ದುಃಖಕರವಾದ ವಾರ್ತೆ ಹೇಳುವೆನು. ಮುಬಾರಕ್ ಅಹ್ಮದ್ ಸಿದ್ದೀಖಿ ಸಾಹಿಬರ ಪುತ್ರಿ ಪ್ರಿಯ ಮರ್‌ಯಮ್ ಸಲ್ಮಾ ಗುಲ್, ಜೂನ್ ದಿನಾಂಕ 17ರಂದು ತನ್ನ 25ನೇ ವಯಸ್ಸಿನಲ್ಲಿ ನಿಧನ ಹೊಂದಿದಳು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಕೆಲವು ದಿನಗಳ ಹಿಂದೆಯಷ್ಟೆ ಅವರ ರೋಗಾವಸ್ಥೆ ಬಗ್ಗೆ ತಿಳಿಯಿತು. ಆಸ್ಪತ್ರೆಗೆ ಪ್ರವೇಶಗೊಳಿಸಿದ್ದರೂ ಅಲ್ಲಾಹನ ವಿಧಿ ನಿರ್ಣಯ ಪ್ರಕಾರ ನಿಧನ ಹೊಂದಿದಳು. ಆ ಪ್ರಿಯ ತರುಣಿಯ ಬಗ್ಗೆ ಅವರನ್ನು ಭೇಟಿಯಾದವರೆಲ್ಲರೂ ಹೇಳುತ್ತಾರೆ, ಆಕೆ ಬಹಳ ಮೃದು ಸ್ವಭಾವಿಯೂ ಸಂತೋಷದಾಯಕ ಸ್ವಭಾವಗುಣ ಹೊಂದಿದವಳೂ ಆಗಿದ್ದರೆಂದು. ನಮಾಝ್‌ಗಳ ಬಗ್ಗೆ ಬಹಳ ನಿಷ್ಠಬದ್ಧರಾಗಿದ್ದರು. ಅನ್ಯರ ಬಗ್ಗೆ ಸಹಾನುಭೂತಿಯುಳ್ಳವಳೂ ಅನ್ಯರಿಗೆ ಸೇವೆ ಮಾಡುವವಳೂ ಆಗಿದ್ದಳು. ಖಿಲಾಫತ್‌ನೊಂದಿಗೆ ಆಕೆಗೆ ಬಹಳ ಪ್ರೀತಿ ಇತ್ತು. ಅವರು ತನ್ನ ತಂದೆ ತಾಯಿ ಮತ್ತು ಪತಿಯನ್ನೂ ಇಬ್ಬರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಆಕೆಯ ಪುತ್ರಿ ನಾಯಾಬ್‌ಗೆ ಐದು ವರ್ಷ ಮತ್ತು ಎರಡನೆಯ ಪುತ್ರಿ ಝರ್‌ಯಾಬ್‌ಗೆ ಎರಡುವರೆ ವರ್ಷ ಪ್ರಾಯವಿದೆ.

ಮರ್‌ಯಮ್ ಸಲ್ಮಾನ್ ಸಾಹಿಬಳ ತಾಯಿ ಗುಲ್ ಮುಬಾರಕ್ ಸಾಹಿಬ ಹೇಳುತ್ತಾರೆ: ಕಳೆದ ಆರು ವಾರಗಳಲ್ಲಿ ಮೂರು ದುಃಖಗಳನ್ನು ಅನುಭವಿಸಬೇಕಾಯಿತು ಎಂದು. ಅವರ ಒಬ್ಬ ಸಹೋದರ ಮೃತರಾದರು. ಅನಂತರ ಒಬ್ಬ ಸಹೋದರಿ ಮೃತರಾದರು. ಈಗ ಅವರ ಪುತ್ರಿ ಅಲ್ಲಾಹನಿಗೆ ಪ್ರಿಯಳಾದಳು. ಅಲ್ಲಾಹನು ಅವರಿಗೆ ಸಹನೆಯನ್ನೂ ಧೈರ್ಯವನ್ನೂ ನೀಡಲಿ.

ಮರ್‌ಯಮ್ ಸಲ್ಮಾನ್ ಸಾಹಿಬ ಎಬ್‌ಸಮ್ ಜಮಾಅತಿನ ಸೆಕ್ರೆಟರಿ ನೌ ಮುಬಾಯಿಯಾತ್ ಆಗಿದ್ದರು. ಬಹಳ ಸಂತೋಷದಾಯಕ ಸ್ವಭಾವಗುಣದವಳೂ ನಗುಮೊಗದವಳೂ ಆವಶ್ಯಕತೆಯುಳ್ಳವರಿಗೆ ಯಾವಾಗಲೂ ಸಹಾಯ ಮಾಡುವವಳೂ ಆಗಿದ್ದಳು. ಅವರ ಹಲ್‌ಖದ ಸದರ್ ಲಜ್ನ ಹೇಳುತ್ತಾರೆ: ಮರ್‌ಯಮ್ ಸಲ್ಮಾನ್ ಸೆಕ್ರೆಟರಿಯಾಗಿ ಬಹಳ ಉತ್ತಮವೂ ಮಾದರಿಯೂ ಆಗಿರುವ ಕೆಲಸ ಮಾಡುತ್ತಿದ್ದರು. ನವ ಅಹ್ಮದಿ ಮಹಿಳೆಯರೊಂದಿಗೆ ಎಂತಹ ಪ್ರೀತಿ ಭರಿತ ಸಂಬಂಧ ಸ್ಥಾಪಿಸಿದ್ದರೆಂದರೆ ನವ ಅಹ್ಮದಿ ಮಹಿಳೆಯರು ಜಮಾಅತಿನ ನಿಝಾಮ್ ಬಗ್ಗೆ ತಾನಾಗಿ ಪ್ರೀತಿ ಹೊಂದುವವರಾಗಿದ್ದರು. ಒಬ್ಬ ನವ ಅಹ್ಮದಿ ಮಹಿಳೆ ಇಂದಲೀಬ್ ಸಾಹಿಬ ಹೇಳುತ್ತಾರೆ: ಪ್ರತಿಯೊಬ್ಬ ಸೆಕ್ರೆಟರಿ ನೌ ಮುಬಾಯಿಯಾತ್ ಮರ್‌ಯಮರ ಹಾಗೆ ಇರಬೇಕೆಂದು ನಾನು

ಯೋಚಿಸುತ್ತೇನೆ. ನಾನು ಮರ್‌ಯಮ್‌ರನ್ನು ಪ್ರಥಮ ಸಾರಿ ಭೇಟಿಯಾದಾಗ ಎಷ್ಟು ಪ್ರೀತಿಯಿಂದ ಆಲಂಗಿಸಿದರೆಂದರೆ ನನಗೆ ಪ್ರೀತಿಸುವ ಒಬ್ಬ ಸಹೋದರಿ ಲಭಿಸಿದಂತಾಯಿತು. ಆಕೆ ನನ್ನ ಮನೆಗೆ ಬರುವಾಗ ನನಗೆ ಮತ್ತು ನನ್ನ ಮಕ್ಕಳಿಗೆ ಚಿಕ್ಕ ಚಿಕ್ಕ ಪಾರಿತೋಷಕಗಳನ್ನು ತರುತ್ತಿದ್ದರು. ಫೋನ್ ಮೂಲಕ ಮತ್ತು ಭೇಟಿ ಮೂಲಕ ಪ್ರತಿ ಸಮಯ ನನ್ನನ್ನು ಸಂಪರ್ಕಿಸುತ್ತಿದ್ದರು. ಸ್ನೇಹಿತರೊಂದಿಗೆ ಮತ್ತು ಇತರರೊಂದಿಗೆ ಹಲವು ಸಾರಿ ಖಿಲಾಫತ್‌ನ ಅನುಗ್ರಹಗಳ ಬಗ್ಗೆ ಮತ್ತು ಜಮಾಅತ್ ನಿಝಾಮ್ ಬಗ್ಗೆ ವಿವರಿಸುತ್ತಿದ್ದರು. ನವ ಅಹ್ಮದಿ ಮಹಿಳೆಯರ ಅತ್ಯುತ್ತಮ ಸ್ನೇಹಿತೆಯಾಗಿದ್ದರು. ಅವರಿಗೆ ಸಹಾಯ ಮಾಡುತ್ತಿದ್ದರು. ಆ ಕಾರಣದಿಂದ ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಭಿರುಚಿ ವರ್ಧಿಸಿತು. ಅವರ ತರಬೇತಿಯ ಕಾರಣ ಈಗ ನಾನು ಈ ಹಲ್‌ಖದ ಜನರಲ್ ಸೆಕ್ರೆಟರಿ ಆಗಿರುವೆನು. ಅವರು ತನಗೆ ದೊರಕುವ ಪಾಕೆಟ್ ಮನಿಯಿಂದ ಉಳಿತಾಯ ಮಾಡಿ ಖಿದ್ಮತ್ ಖಲ್ಕ್ ಕೆಲಸಗಳನ್ನು ಸಹ ಮಾಡುತ್ತಿದ್ದರು.

ಮರ್‌ಯಮರ ಪಿತ ಬರೆಯುತ್ತಾರೆ: ಕ್ರಮಬದ್ಧವಾಗಿ ಖುತ್‌ಬಗಳನ್ನು ಆಲಿಸುತ್ತಿದ್ದಳು. ಪ್ರತಿಯೊಂದು ಕೆಲಸ ಮಾಡುವಾಗ ಧಾರ್ಮಿಕ ಕಾರ್ಯಗಳಿಗೆ ಆದ್ಯತೆ ನೀಡುತ್ತಿದ್ದಳು. ನಿಧನ ಹೊಂದುವ ಎರಡು ದಿನಗಳ ಮೊದಲು ಮಜ್ಲಿಸ್ ಶೂರಾ ಇತ್ತು. ಮರ್‌ಯಮ್ ICU ನಲ್ಲಿ ಇದ್ದಳು. ನಾನು ಹೇಳಿದೆ ನಾನು ಶೂರದಲ್ಲಿ ಭಾಗವಹಿಸದೆ ಇರಲು ಅನುಮತಿ ಕೇಳುತ್ತೇನೆ. ಅವಳು ಹೇಳಿದಳು: ತಾವು ನನ್ನ ಬಗ್ಗೆ ಚಿಂತಿಸಬೇಡಿರಿ. ನನ್ನ ಕಾರಣದಿಂದ ಜಮಾಅತಿನ ಕಾರ್ಯಕ್ರಮವನ್ನು ಬಿಡಬೇಡಿರಿ. ನೀವು ಶೂರದಲ್ಲಿ ಭಾಗವಹಿಸಿರಿ. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಬೇಕೆಂದು ನಮ್ಮಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರತಿಜ್ಞೆ ಮಾಡಿಸಿದ್ದಾರೆ. ಅವಳನ್ನು ಪ್ರವೇಶಿಸಲಾದ ಸೈಂಟ್ ಜಾರ್ಜ್ ಆಸ್ಪತ್ರೆಯ ನರ್ಸ್ ಹೇಳಿದರು: ಮರ್‌ಯಮ್‌ಳೊಂದಿಗೆ ಮಾತನಾಡುವಾಗ ನಾನು ಒಬ್ಬ ದೇವತೆಯನ್ನು ಭೇಟಿಯಾಗುವಂತೆ ತೋರುತ್ತಿತ್ತು. ಆಕೆ ಯಾವಾಗಲೂ ಮೊದಲು ಸಲಾಮ್ ಹೇಳಿ ಅನ್ಯರ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ಅನ್ಯರಲ್ಲಿರುವ ಒಳಿತನ್ನು ಹುಡುಕುತ್ತಿದ್ದಳು ಮತ್ತು ಅವುಗಳ ಬಗ್ಗೆ ಮೆಚ್ಚಿಗೆ ಸೂಚಿಸುತ್ತಿದ್ದಳು. ಆಕೆ ಯಾವಾಗಲೂ ಹಸನ್ಮುಖಿಯಾಗಿದ್ದಳು. ಅಲ್ಲಾಹನ ಬಗ್ಗೆ ಬಹಳ ಭರವಸೆ ಹೊಂದಿದವಳೂ ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞತೆ ಸೂಚಿಸುವವಳೂ ಆಗಿದ್ದಳು.

ಅಲ್ಲಾಹನು ಆಕೆಗೆ ಕಾರುಣ್ಯದೋರಲಿ. ಮಗ್‌ಫಿರತ್‌ನೊಂದಿಗೆ ಅಲ್ಲಾಹನು ವರ್ತಿಸುವವನಾಗಲಿ. ಆಕೆ ಅಲ್ಲಾಹನ ಮೇಲೆ ಇಟ್ಟ ಭರವಸೆಗಿಂತಲೂ ಮಿಗಿಲಾಗಿ ಅಲ್ಲಾಹನು ಆಕೆಯೊಂದಿಗೆ ಪ್ರೀತಿಯಿಂದ ವರ್ತಿಸುವವನಾಗಲಿ. ಆಕೆಯನ್ನು ಪ್ರೀತಿಯಿಂದ ತಬ್ಬಿಕೊಳ್ಳಲಿ ಮತ್ತು ಆಕೆಯ ಪದವಿಯನ್ನು ಉನ್ನತಗೊಳಿಸಲಿ. ಆಕೆಯ ಪುತ್ರಿಯರನ್ನು ಅಲ್ಲಾಹನು ಸಂರಕ್ಷಿಸುವವನಾಗಲಿ. ಆಕೆ ತನ್ನ ಪುತ್ರಿಯರಿಗೋಸ್ಕರ ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸಲಿ. ಆಕೆಯ ತಂದೆ ತಾಯಂದಿರಿಗೆ ಸಹನೆ ಮತ್ತು ಧೈರ್ಯ ನೀಡಲಿ. ಅವರು ಸಹ ಅಲ್ಲಾಹನ ತೃಪ್ತಿಯ ಬಗ್ಗೆ ಹೃತ್ಪೂರ್ವಕವಾಗಿ ತೃಪ್ತರಾಗಲಿ. ಆಕೆಯ ಪುತ್ರಿಯರನ್ನು ಮಾದರಿಯಾಗಿ ಪೋಷಿಸುವವರಾಗಲಿ. ಮತ್ತು ಅವರಿಗೆ ಸಹಾಯ ಮಾಡುವವರಾಗಲಿ. ಆಕೆಯ ಪತಿಯನ್ನು ಪುತ್ರಿಯರಿಗೆ ತಂದೆ ಮತ್ತು ತಾಯಿಯ ಪ್ರೀತಿಯನ್ನು ನೀಡುವವರನ್ನಾಗಿ ಮಾಡಲಿ. ಅಲ್ಲಾಹನು ಮೃತಳ ಪದವಿ ಉನ್ನತಗೊಳಿಸಲಿ – ಆಮೀನ್.

———————*****———————


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, London, UK, On 21-06-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon